**ದಿನಾಂಕ: 27/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ. ಎಂ ಸಿ ಹೆಚ್ ವಕೀಲರಿಂದ:**

2. 2 ಮತ್ತು 5 ನೇ ಐಟಂ ಸ್ವತ್ತುಗಳನ್ನು 1 ರಿಂದ 4 ನೇ ಎದುರುದಾರರ ಕುಟುಂಬದವರಿಂದ ಖರೀದಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಕರಾರಿನಲ್ಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಿ 2 ಮತ್ತು 5 ನೇ ಸ್ವತ್ತುಗಳ ಸರ್ವೆ ನಂಬರುಗಳು ಅದಲು ಬದಲಾಗಿದೆ ಎಂದು ತಿಳಿಸಿಲ್ಲ. ನಿಆರ್–1 ರ ಪ್ರಕಾರ ಖಾತೆ ಮಾಡಿಸಿಕೊಳ್ಳಲು ನನ್ನ ತಂದೆ ಪ್ರತಿಯತ್ನಿಸಲಿಲ್ಲ, ಕಾರಣ ವಾದಿಗಳು ಸಲ್ಲಿಸಿರುವ ದಾವೆ ಬಗ್ಗೆ ನಮಗೆ ಗೊತ್ತಿರಲಿಲ್ಲ. ನಿಆರ್–1 ರ ಪ್ರಕಾರ ನಮ್ಮ ಮಾಲೀಕತ್ವ, ಸ್ವಾಧೀನ ನಿರುಾಪಿಸಲು ನಾವು ದಾವೆ ಸಲ್ಲಿಸಬಹುದು ಎಂದರೆ ಸರಿ. ನಿಆರ್–1 ರಿಂದ ನಿಆರ್–8 ರವರೆಗೆ ಇರುವ ದಾಖಲೆಗಳು 2 ಮತ್ತು 5 ನೇ ಐಟಂ ಸ್ವತ್ತುಗಳಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಮಗೆ 2 ಮತ್ತು 5 ರ ಸ್ವತ್ತುಗಳ ಮೇಲೆ ಯಾವುದೇ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನ ಇಲ್ಲದಿದ್ದರೂ ಅರ್ಜಿದಾರರಿಗೆ ತೊಂದರೆ ಕೊಡಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು , ಸ. ನಂ 182/25 ರಲ್ಲಿ ಮೂರು ಮನೆಗಳನ್ನು ಕಟ್ಟಿಕೊಂಡು ಸುಮಾರು 15–20 ವರುಷಗಳಿಂದ ವಾಸ ಮಾಡುತ್ತಿದ್ದೇವೆ ಮತ್ತು ಸ. ನಂ. 182/32 ರಲ್ಲಿ ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

3. ನಮ್ಮ ಕುಟುಂಬದವರು ಹಿಂದಿನಿಂದಲೂ ಗ್ರಾಮದ ಯಜಮಾನಿಕೆ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿ. ನಾನೂ ಸಹ ಗ್ರಾಮದ ಯಜಮಾನಿಕೆ ಮಾಡುತ್ತಿದ್ದೇನೆ ಎಂದರೆ ಸರಿ. ಆ ರೀತಿ ಜಮೀನಿನಲ್ಲಿ ಮನೆ ಕಟ್ಟಿಕೂಂಡಿದ್ದರೆ ಅನ್ಯಕ್ರಾಂತ ಮಾಡಿಸುತ್ತಿದ್ದೆವು ಎಂದರೆ ಸರಿಯಲ್ಲ. ಅರ್ಜಿ ಸ್ವತ್ತುಗಳಲ್ಲಿ ಯಾವುದೇ ಮನೆಯನ್ನು

ನಾವು ನಿರ್ಮಿಸದಿದ್ದರೂ ಸಹ ಅರ್ಜಿದಾರಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**